# ದಕ್ಷಿಣ ಭಾರತದ
# ಮಠಮಾನ್ಯಗಳು

## SOUTH INDIAN MATHAMANYAS




ಪ್ರಧಾನ ಸಂಪಾದಕರು

**ಪ್ರಾ. ಅನಂತ ಬೀ. ಕುಲಕರ್ಣಿ**

ಸಂಪಾದಕರು

**ಡಾ. ರಾಮು ಎಚ್. ಸಜ್ಜನ್**






# INDEX


- Matha-Manyas of South India
  - Shrinivas V. Padigar 1
- Historical Background to the Shiva Matha: Early Chalukyan Period (Mahakuta)
  - Dr. Meena M. Mohite 14
- The Rich legacy of the Digambar Jain Matha at Shravanbelagola
  - Shri Vinod Doddanavar
  - Mrs. Swatee Jog 18
- Mathas - History Organization and Culture
  - A. B. Kulkarni 26
- Historical Traditional of Indian Matha's
  - Dr. Ramu H. Sajjan 35
- "ಭುವನದ ಭಾಗ್ಯ ಕಲಕೇರಿ ಜಾಲಹಳ್ಳಿಮಠ"
  – ಪ್ರೊ. ಎಸ್. ಎಸ್. ಹೂಗಾರ 48
- ಬಬಲೇಶ್ವರ ಮಠಗಳ ಅಧ್ಯಯನ – ಪ್ರೊ. ರಮೇಶ ಕುಂಬಾರ 52
- ಶ್ರೀ ಪಟ್ಟೇಕಂಥಿ ಹಿರೇಮಠ ಮನಗೂಳಿ
  – ಅಪ್ಪು ಕ. ಜಾಧವ 63
- A COMPREHENSIVE STUDY ON SHRI SHARADA PEETHAM, SRINGERI ; ONE OF THE OLDEST MATHA MANYAS IN INDIA
  - Prof. Vidya I. Vastrad 69
- ಸಿಂದಗಿಯ ಶ್ರೀಭೀಮಾಶಂಕರ ಮಠ ಪರಂಪರೆ
  – ಪ್ರೊ. ಬಿ. ಜಿ. ಮಠ 80
- ಬಾಗಲಕೋಟೆ ಜಿಲ್ಲೆಯ ಮಠಮಾನ್ಯಗಳು
  – ಡಾ. ಪ್ರಕಾಶ ಎನ್. ನರಗುಂದ 88

- ಶ್ರೀ ಅನ್ನದಾನೇಶ್ವರ ಮಠ – ಡಾ. ಸುಮಂಗಲಾ ಶಿ. ಅಂಗಡಿ. 111
- EDUCATIONAL CONTRIBUTIONS OF MATHA MANYAS: - Prof. Sheetal. V. Barshi 117
- ವೈರಾಗ್ಯ ನಿಧಿ ಅಕ್ಕಮಹಾದೇವಿ ಮಠ ಅಥರ್ಗಾ - Shrishail Hatti 127
- ಸಿಂದಗಿಯ ಸಾರಂಗಮಠ ಪರಂಪರೆ – ಪ್ರೊ. ಎಮ್. ಎಸ್. ಹೊಸಮನಿ 131
- ಕುಂಟೋಜಿ ಹಿರೇಮಠದ ಮೂಲ ತಿರುಳು ಜ್ಯೋತಿ ಬೆಳಗು, ಹಾಕಿ ಕೊಲಗು, – ಡಾ. ಪರಶುರಾಮ ಚಂದಪ್ಪ 139
- Literary Contributions of Matha Manyas The Krishna Matha - Prof. Nandini N Doddamani 146
- ಕರ್ನಾಟಕದ ಮಠ-ಮಾನ್ಯಗಳ ಶೈಕ್ಷಣಿಕ ಕೊಡುಗೆಗಳು – ಮುಕುಂದರ.ಬ.ದೊಡ್ಡಮನಿ 160
- ಬಾಗಲಕೋಟೆ ತಾಲೂಕಿನ ಮಠಗಳು – ಪ್ರೊ. ಸರೋಜಿನಿ ಹೊಸಕೇರಿ 167
- ಕಲ್ಯಾಣದ ಕಳಚೂರಿಗಳ ಕಾಲದ ಶಾಸನೋಕ್ತ ಮಠಗಳು – ಪ್ರೊ.ಎಸ್.ಆರ್.ನಾಗಣ್ಣವರ 182
- ಶ್ರೀ ಕನ್ನೊಳ್ಳಿಯ ಹಿರೇಮಠದ ಪರಂಪರೆ – ಪ್ರೊ. ಕೆ. ಎಸ್. ಮೂಡಗಿ 190
- ಕರಭಂಟನಾಳದ ಹಿರೇಮಠ : ಚಾರಿತ್ರಿಕ ಹಿನ್ನೆಲೆ – ಪ್ರೊ. ಶಿ. ಪಾಂಡ್ ಪಂಗರಿ 196
- ಮುಧೋಳ ಪರಿಸರದ ಮಠಮಾನ್ಯತೆಗಳು – ಡಾ.ಸಂಗಮೇಶ ಕಲ್ಯಾಣಿ 205
- ಶ್ರೀ. ಬಂಥನಾಳ ಸಂಗನಬಸವ ಶಿವಯೋಗಿಗಳ ಕೊಡುಗೆಗಳು – ಡಾ. ಎ. ಎ. ಮುಲ್ಲಾ 210
- ಶೇಖ ಕಮ್ಮುದ್ದೀನ ಜಿಂದಾ ದಿಲ್ ಬಿಜಾಪುರದ ಅಧ್ಯಾತ್ಮ ಸೂಫಿ ಸಂತರು – ಡಾ. ಮುಸ್ತಾಕ ಅಹ್ಮದ 214
- Role of Mathas Towards Society and Societal Development – Prof S.M.Khot 224
- ಬಬಲೇಶ್ವರ ಬೃಹನ್ಮಠ – ಡಾ॥ ಎಸ್.ಆರ್. ಬಿರಾದಾರ 233
- ಬಸವನ ಬಾಗೇವಾಡಿಯ ವಿರಕ್ತ ಮಠದ ಪರಂಪರೆ ಇತಿಹಾಸ – ಡಾ॥ ಶೋಭಾ. ಬಿ. ಜನಗೊಂಡ 244
- "ಶಂಕರಾಚಾರ್ಯರು ಹಾಗೂ ಶೃಂಗೇರಿ ಶಾರದಾಪೀಠ"

**Title-** Gist of Kuntoji Hiremath: Light the Lamp and Eradicate the Caste
- Dr. Parashuram C.

# ಕುಂಟೋಜಿ ಹಿರೇಮಠದ ಮೂಲ ತಿರುಳು ಜ್ಯೋತಿ ಬೆಳಗಿಸಿ ಜಾತಿ ತೊಲಗಿಸಿ

ಡಾ. ಪರುಶುರಾಮ ಚಂದಪ್ಪ

ಭಾರತವು ಸಮ್ಮಿಶ್ರ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಹೊಂದಿದ ರಾಷ್ಟ್ರವಾಗಿದೆ. ಅನೇಕ ಧರ್ಮ, ಜಾತಿ, ಭಾಷೆ ಸಂಸ್ಕೃತಿ ಮತ್ತು ಪ್ರಾದೇಶಿಕ ಭಿನ್ನತೆಯನ್ನು ಹೊಂದಿದ ಜನಸಮೂಹಗಳಿಂದ ಕೂಡಿ ವೈವಿಧ್ಯಮಯವಾಗಿದೆ. ಭಾರತವು ಸನಾತನ ಕಾಲದಿಂದಲೂ ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಗುರು ಪರಂಪರೆಯನ್ನು ಹೊಂದಿದ ಸುಂದರ ನಾಡಾಗಿದೆ. ಭಾರತದಲ್ಲಿ ಅನೇಕ ಋಷಿ-ಮುನಿಗಳು ಸಾಧು ಸನ್ಯಾಸಿಗಳು, ತತ್ವಜ್ಞಾನಿಗಳು, ಸಮಾಜ ಸುಧಾರಕರು, ಮಠಾಧೀಶರು ಬದುಕಿ ಬಾಳಿ ತಮ್ಮದೆಯಾದ ಕೊಡುಗೆಯನ್ನು ನೀಡಿದ್ದಾರೆ. ಹಾಗೆಯೇ ಸಮಾಜದ ಬದಲಾವಣೆ ಮತ್ತು ಸುಧಾರಣೆಯಲ್ಲಿ ಮಠ ಮಾನ್ಯಗಳ ಕಾರ್ಯ ಅನನ್ಯವಾಗಿದೆ. ರಾಜ್ಯ ಮತ್ತು ಸರಕಾರ ಮಾಡಬೇಕಾದ ಸಾಮಾಜಿಕ ಅಭಿವೃದ್ಧಿ ಕಾರ್ಯಗಳನ್ನು ಮಠ ಮಾನ್ಯಗಳು ಪುರಾತನ ಕಾಲದಿಂದಲೂ ಮಾಡತ್ತಾ ಬಂದಿವೆ. ಭಾರತದ ಸಂಸ್ಕೃತಿ ಮತ್ತು ಪರಂಪರೆಯಲ್ಲಿ ಮಠ ಮಾನ್ಯಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಭಾರತದ ಭೂಪುಟದಲ್ಲಿ ಕರ್ಣೇಂದ್ರಿಯ ಆಕೃತಿಯಲ್ಲಿ ಕಂಗೊಳಿಸುತ್ತಿರುವ ಕರ್ನಾಟಕವು ಮಠ ಪರಂಪರೆಗೆ ಹೆಸರು ವಾಸಿಯಾಗಿದೆ. ಕರ್ನಾಟಕದ ಮಠ ಮಾನ್ಯಗಳು ತಮ್ಮ ಕಾಯಕ ನಿಷ್ಠೆ, ಉಚಿತ ಪ್ರಸಾದ ವ್ಯವಸ್ಥೆಯಿಂದ ದೇಶದಲ್ಲಿಯೇ ಹೆಸರುವಾಸಿಯಾಗಿವೆ. ಅದರಲ್ಲೂ ಉತ್ತರ ಕರ್ನಾಟಕದಲ್ಲಿರುವ ಮಠ ಮಾನ್ಯಗಳು ಧಾರ್ಮಿಕ ಮತ್ತು ಸಮಾಜಿಕ ಕಾರ್ಯಕ್ಕೆ ತಮ್ಮನ್ನು ತಾವು ತೊಡಗಿಸಿಕೊಂಡಿವೆ. ಕರ್ನಾಟಕದ ವಿಜಯಪೂರ ಪ್ರಾಚೀನ ಕಾಲದಿಂದಲೂ ಐತಿಹಾಸಿಕ ಪ್ರಸಿದ್ಧಿಪಡೆದ ಜಿಲ್ಲೆಯಾಗಿದೆ.

ವಿಜಯಪೂರ ಜಿಲ್ಲೆಯಲ್ಲಿರುವ ಮಠ ಮಾನ್ಯಗಳು ದೇಶದ ಚರಿತ್ರೆಯಲ್ಲಿಯೇ ಪ್ರಮುಖ ಪಾತ್ರವಹಿಸಿವೆ. ವಿಜಯಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಐತಿಹಾಸಿಕ ಪ್ರಸಿದ್ಧವಾದ ಕುಂಟೋಜಿಯಲ್ಲಿರುವ ಹಿರೇಮಠವು ತನ್ನದೆ ಆದ ಇತಿಹಾಸ

ಹಾಗೂ ಧಾರ್ಮಿಕ ಪರಂಪರೆಯನ್ನು ಹೊಂದಿದೆ. ಮನುಕುಲಕ್ಕೆ ಅಂಟಿಕೊಂಡಿರುವ ಜಾತಿ ಎಂಬ ಪೆಡಂಭೂತವನ್ನು ಹೊಡೆದೋಡಿಸಲು ಶ್ರೀ. ಜಗಜ್ಯೋತಿ ಬಸವಣ್ಣನವರ ವಿಚಾರದಂತೆ ಜಾತಿ ರಹಿತ ಸಮಾಜವನ್ನು ನಿರ್ಮಿಸಲು 'ಜೋತಿ ಬೆಳಗಿಸಿ ಜಾತಿ ತೊಲಗಿಸಿ' ಎಂಬ ಧ್ಯೇಯ ವಾಕ್ಯದೊಂದಿಗೆ ಮಠದ ಸಕಲ ಕಾರ್ಯಗಳು ನಿರಂತರವಾಗಿ ನಡೆಸಿಕೊಂಡು ಹೋಗುವದರಲ್ಲಿ ಕುಂಟೋಜಿಯ ಹಿರೇಮಠವು ಮುಂಚೂಣಿಯಲ್ಲಿದೆ.

**ಶ್ರೀ ಚನ್ನಬಸವ ಮಾಹಾಸ್ವಾಮೀಗಳು :**

ವಿಜಯ ನಗರ ಅರಸರ ಕಾಲದಲ್ಲಿ ಬಸವಯ್ಯ ಎಂಬ ಶರಣರು ವಾಸವಾಗಿದ್ದರು. ಮುಂದೆ ಅವರು ಬದಾಮಿಯ ಚಾಲುಕ್ಯರ (ಕಾಲದಲ್ಲಿ) ರಾಜದಾನಿಯಲ್ಲಿ "ಕಂತಿ ಭಿಕ್ಷೆ" ಕಾಯಕದಲ್ಲಿ ತೊಡಗಿದ್ದರು. ಅವರು ಕಂತಿ ಬೀಕ್ಷೆ ಕಾಯಕ ಮಾಡುತ್ತಾ ಹಳ್ಳಿಯಿಂದ ಹಳ್ಳಿಗೆ ನಾಡಿನಿಂದ ನಾಡಿಗೆ ತಿರುಗುತ್ತಾ ತಿರುಗುತ್ತಾ ಮುದ್ದೇಬಿಹಾಳ ತಾಲೂಕಿನ ಕುಂಟೋಜಿಯ ಪಕ್ಕದಲ್ಲಿರುವ ಮಳಿಬಸವೇಶ್ವರ ಎಂಬ ಕ್ಷೇತ್ರಕ್ಕೆ ಬರುತ್ತಾರೆ. ತಾನು ದಾಂಪತ್ಯ ಜೀವನಕ್ಕೆ ಕಾಲಿಡಬೇಕು, ಸಂಸಾರ ಕಂಡು ಸದ್ಗತಿಯನ್ನೂ ಕಾಣಬೇಕು ಎಂಬ ಹಂಬಲವನ್ನು ವ್ಯಕ್ತಪಡಿಸುತ್ತಾರೆ. ಆದರಂತೆ ಮದುವೆಯಾಗಿ ದಾಂಪತ್ಯ ಜೀವನಕ್ಕೆ ಕಾಲಿಟ್ಟು ನಾಲ್ಕು ಮಕ್ಕಳನ್ನು ಪಡೆಯುತ್ತಾರೆ. ಶಿವಶರಣ ಬಸವಯ್ಯನ ನ್ಹಾಲ್ಕು ಮಕ್ಕಳಲ್ಲಿ ಮೊದಲನೆಯ ಮಗನೆ ಚನ್ನಬಸವಯ್ಯ ಪಟ್ಟಾಧ್ಯಕ್ಷರು. ಅವರು ಬಾಲ್ಯದಲ್ಲಿ ತೊಟ್ಟಿಲೊಳಗೆ ಆಡುತ್ತಿರುವಾಗ ಮಕ್ಕಳ ಆಟದ ವಸ್ತು ಗಿಲಗಿಂಚಿ ಕೊಟ್ಟರೆ ಕೈಯಲ್ಲಿ ಹಿಡಿಯದೆ ಅವರು ವಿಭೂತಿಯೊಂದಿಗೆ ಆಟವಾಡಿ ಬೆಳೆದರು. ಮುಂದೆ ಅವರು ಬಹುದೊಡ್ಡ ಶರಣರಾಗಿ ಕುಂಟೋಜಿಯ ಹಿರೇಮಠದ ಮೊದಲ ದೀಪದ ಬೆಳಕಿನ ಕುಡಿಯಾಗಿ ಸಮಾಜಕ್ಕೆ ಬೆಳಕಾದರು.

ಮುಂದೆ ಅವರು ಇಡೀ ವಿಜಯಪೂರ ಜಿಲ್ಲೆಯಲ್ಲಿ "ಹಳ್ಳಿಗೆ ಏಕ ರಾತ್ರಿ ಪಟ್ಟಣಕ್ಕೆ ಪಂಚರಾತ್ರಿ" ಎಂಬ ಸಿದ್ಧಾಂತದ ತಳಹದಿಯ ಮೇಲೆ ಪ್ರತಿಯೊಬ್ಬರ ಮನೆಗೆ ತೆರಳಿ ಜಾತಿ, ಮತ ಎಂಬ ಬೇಧವಿಲ್ಲದೆ ಲಿಂಗದೀಕ್ಷೆ ಮಾಡುವ ಕಾರ್ಯದಲ್ಲಿ ತೊಡಗುತ್ತಾರೆ. ಎಲ್ಲಾ ಜಾತಿ ಜನಾಂಗದವರಿಗೆ ಲಿಂಗದೀಕ್ಷೆ ಮಾಡುವ ಇವರ ನಡೆಯನ್ನು ಬಲವಾಗಿ ವಿರೋಧಿಸುತ್ತಾರೆ ಅದಕ್ಕೆ ಅವರು "ದಾಸಿ ಪುತ್ರನಾಗಲಿ ವೇಶ್ಯಯ ಪುತ್ರನಾಗಲಿ ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ಪೂಜಿಸುವ ಧರ್ಮ ನಮ್ಮದು" ಎಂದು ಹೇಳಿ ಎಲ್ಲಾ ವರ್ಗದವರಿಗೂ ಲಿಂಗದೀಕ್ಷೆ ಕೊಟ್ಟೆ ಕೊಡುತ್ತೇನೆ ಎಂಬ ಪಣತೊಟ್ಟರು. ಆದರೆ, ಲಿಂಗದೀಕ್ಷೆ ಕೊಡುವದಕ್ಕೆ ಹಳ್ಳಿಗಳಿಗೆ ಹೋದಾಗ ಇವರನ್ನೂ ಬಲವಾಗಿ ವಿರೋಧಿಸಲಾಯಿತು. ಇದರಿಂದ ನೊಂದ ಶ್ರೀಗಳು ತಾಲೂಕಿನ ಎಲ್ಲಾ ಜಂಗಮರಿಗೆ ಅಯ್ಯಾಚಾರ ದೀಕ್ಷೆಯನ್ನು ಕೊಟ್ಟರೆ ಅವರ ಮೂಲಕ ಶ್ರೀ ಜಗಜ್ಯೋತಿ ಬಸವಣ್ಣನವರ ಕನಸಾದ ಜಾತಿ ಮತ್ತು ಲಿಂಗ ತಾರತಮ್ಯವನ್ನು ನಿವಾರಣೆ ಮಾಡಬಹುದು ಎಂದು ತಿಳಿದು ಜಂಗಮರಿಗೆ ಲಿಂಗ

ದೀಕ್ಷೆ ಮಾಡಲು ಪ್ರಾರಂಭಿಸಿದರು. ಅಂದಿನ ಕಾಲದಲ್ಲಿ ಹತ್ತು ಸಾವಿರ ಜನರಿಗೆ ಲಿಂಗದೀಕ್ಷೆಯನ್ನು ಮಾಡಿ ವೀರಶೈವ ಧರ್ಮ ಮತ್ತು ಬಸವ ಪರಂಪರೆಯನ್ನು ಉಳಿಸಿ ಬೆಳಸಬೆಕೆಂದು ಜನರಲ್ಲಿ ಜಾಗೃತಿ ಮೂಡಿಸುತ್ತಾರೆ. ಶ್ರೀ ಮಠವು ತನಗಾಗಿ ಅಲ್ಲ ಮಠದಿಂದ ಸಮಾಜ ಪರಿವರ್ತನೆಯಾಗಬೇಕು ಎಂಬ ದೃಷ್ಟಿಯಿಂದ ಲಿಂಗದೀಕ್ಷೆಯ ಮೂಲಕ ಜಾತಿ ನಿವಾರಣೆಗೆ ಮುಂದಾದರು. ಬಸವಣ್ಣನವರ ಜಾತಿರಹಿತ ಸಮಾಜದ ನಿರ್ಮಾಣಕ್ಕೆ ಪೂರಕವಾಗಿ ಯಾವುದೇ ಜಾತಿ, ಧರ್ಮ ಮತ್ತು ಲಿಂಗ ತಾರತಮ್ಯವಿಲ್ಲದೆ ಲಿಂಗದೀಕ್ಷೆ ಮಾಡಲು ಪ್ರಾರಂಭಿಸಿದರು. ಲಿಂಗದೀಕ್ಷೆ ಪಡೆದವರಾದರೂ ಎಲ್ಲರಲೂ ಕೂಡಿ ಊಟ ಮಾಡಬಹುದು ಕೂಡಿ ಕೆಲಸ ಮಾಡಬಹುದು ಮತ್ತು ಕೂಡಿ ನಲಿಯಬಹುದು ಎಂಬ ಬಲವಾದ ನಂಬಿಕೆ ಹೊಂದಿದ್ದರು.

ಶ್ರೀಗಳು ಒಂದು ಊರಿನಿಂದ ಮತ್ತೊಂದು ಊರಿಗೆ ಸಂಚರಿಸುವಾಗ ಭೀಮಾ ಎಂಬ ಒಬ್ಬ ಬ್ರಾಹ್ಮಣ ಮನೆತನದ ವ್ಯಕ್ತಿ ಬಂದು ಪೂಜ್ಯರೆ "ನೀವು ಎಲ್ಲಾ ಜಾತಿಯವರಿಗೆ ಲಿಂಗದೀಕ್ಷೆ ಮಾಡತ್ತಿರುವಿರಿ ನನಗೂ ನೀವು ಲಿಂಗ ದೀಕ್ಷೆ ಮಾಡಬೇಕು" ಎಂದು ಕೇಳಿಕೊಳ್ಳುತ್ತಾನೆ. ಆಗ ಚನ್ನಬಸವ ಮಹಾಸ್ವಾಮಿಗಳು ನಾನು ನಿನಗೆ ಲಿಂಗದೀಕ್ಷೆ ಮಾಡಲು ಬದ್ಧನಾಗಿದ್ದೇನೆ ಆದರೆ ನೀನು ನಿನ್ನ ಸಮಾಜದ ವಿರೋಧವನ್ನು ಎದುರಿಸಲು ಸಿದ್ಧನಾಗು ಎಂದು ಹೇಳುತ್ತಾರೆ. ಆದಕ್ಕೆ ಅವನು ಒಪ್ಪಿಕೊಳ್ಳುತ್ತಾನೆ. ಆದರೆ ಮೊದಲೇ ನಿರೀಕ್ಷೆಯಂತೆ ಲಿಂಗ ಕಟ್ಟಿಕೊಂಡು ಬಂದರೆ ನಮ್ಮ ಜನಿವಾರ ಹರಿದು ಹಾಕು ಎಂದು ಬ್ರಾಹ್ಮಣ ಸಮಾಜದವರು ಬಲವಾಗಿ ವಿರೋಧಿಸುತ್ತಾರೆ. ಆಗ ಭೀಮಾ ಎಂಬ ವ್ಯಕ್ತಿ ಒಬ್ಬ ಜಂಗಮ ಸಮಾಜದ ವ್ಯಕ್ತಿಯನ್ನು ಕರೆದುಕೊಂಡು ಕುಂಟೋಜಿಯ ಮಠಕ್ಕೆ ಬರುತ್ತಾರೆ. ನಾನು ಎಲ್ಲಾ ರೀತಿಯ ವಿರೋಧವನ್ನು ಎದುರಿಸಲು ಮತ್ತು ಲಿಂಗ ದೀಕ್ಷೆಯನ್ನು ಪಡೆಯಲು ಸಿದ್ದನಾಗಿದ್ದೇನೆ. ಈಗ ನನಗೆ ಲಿಂಗದೀಕ್ಷೆ ಕೊಡಬೇಕೆಂದು ಶ್ರೀಗಳಲ್ಲಿ ಕೇಳಿಕೊಳ್ಳುತ್ತಾನೆ. ಆಗ ಶ್ರೀಗಳು ನಾನು ಲಿಂಗದೀಕ್ಷೆ ನೀಡಲು ಸಿದ್ದನಿದ್ದೇನೆ. ಅದಕ್ಕಿಂತ ಮೊದಲು ನಾನು ನಿನ್ನನ್ನು ಪರೀಕ್ಷಿಸುತ್ತೇನೆಂದು. ಆ ಭೀಮಾ ಎಂಬ ಬ್ರಾಹ್ಮಣ ವ್ಯಕ್ತಿಗೆ ಅನೇಕ ರೀತಿಯ ಪರೀಕ್ಷೆಗೆ ಒಳಪಡಿಸುತ್ತಾರೆ ಸೇವಾ ಕಾರ್ಯ, ಸ್ವಚ್ಛತಾ ಕಾರ್ಯ ಹೀಗೆ ದಿನವಿಡಿ ಅವನಿಗೆ ಕೆಲಸ ನೀಡುತ್ತಾರೆ. ಮತ್ತು ಅವನಿಗೆ ಅರೆಹೊಟ್ಟೆ ಊಟ ಅಷ್ಟೆ ಅಲ್ಲ ಹಳಸಿದ ಅನ್ನ ನೀಡುತ್ತಾರೆ. ಇದನ್ನೂ ಕಣ್ಣಾರೆ ಕಂಡು ಅವನ ಜೊತೆಯಲ್ಲಿ ಬಂದಿದ್ದ ಓರ್ವ ಜಂಗಮ ವ್ಯಕ್ತಿಯು ಶ್ರೀ. ಚನ್ನಬಸವ ಮಹಾಸ್ವಾಮಿಗಳನ್ನು ಕುರಿತು "ಸ್ವಾಮಿಗಳಾದ ನೀವು ಮಾನವೀಯ ಗುಣಗಳನ್ನು ಅಳವಡಿಸಿಕೊಳ್ಳಬೇಕು ಅದರೆ ಲಿಂಗದೀಕ್ಷೆ ಕೇಳಿ ಬಂದ ವ್ಯಕ್ತಿಗೆ ಈ ರೀತಿ ಹಳಸಿದ ಅನ್ನ ಹಾಕುತ್ತಿರಲ್ಲಾ ನಿಮಗೆ ಸ್ವಲ್ಪಾದರೂ ಮನಸ್ಸಾತ್ವವಿದೆಯೇ?" ಎಂದು ಕೇಳುತ್ತಾರೆ. ಆಗ ಚನ್ನಬಸವ ಶಿವಯೋಗಿಗಳು ಬಹಳ ಚನ್ನಾಗಿ ತಿಳಿ ಹೇಳುತ್ತಾರೆ "ಹಳಸಿದ ಅನ್ನ ಆದ, ಅದು ನನಗೂ ಗೊತ್ತಿದೆ. ನಾನು ಅವನಿಗೆ

ಸುಮ್ಮನೆ ಲಿಂಗ ಕಟ್ಟುವುದಕ್ಕೆ ಇದರಿಂದ ಸಾಧ್ಯ ಇದೆ ಅಂತ ತಿಳಿದು ಬಂದಾಗಲೂ ಅವರ ಲಿಂಗದೀಕ್ಷೆ ಪಡೆದುಕೊಂಡರು. ಈ ಹೊಸದ ಸಮಾಜವನ್ನು, ಬುದ್ಧನಾಗುವಂಥ ಅವಕ್ಕೆ ಜಾತಿ ಮತ್ತು ಲಿಂಗ ತಾರತಮ್ಯಗಳನ್ನು ಒಳಗೊಂಡ ಈ ಹೊಸದ ಸಮಾಜವನ್ನು, ಬುದ್ಧನಾಗುವ ಶಾಕ್ಯ ಮತ್ತು ಲಿಚ್ಛ ಅವನಲ್ಲಿ ಇರುವಂಥ ಅಥವಾ ಇಲ್ಲ ಎಂದು ತಿಳಿಯಲು ಈ ಜಾತಿ ಮುಖ್ಯವಾಗುವುದು ಎಂದು ಹೇಳುತ್ತಾರೆ.

ಶ್ರೀ ಚನ್ನಬಸವ ಸ್ವಾಮಿಗಳೊಂದಿಗೆ ಭೀಮಾ ಎಂಬ ವ್ಯಕ್ತಿಯು ದಾಸೋಹ ಅಧ್ಯಾತ್ಮ ಮತ್ತು ವೈಚಾರಿಕ ವಿಚಾರಗಳಿಗೆ ಸಂಬಂಧಿಸಿದಂತೆ ಚರ್ಚೆಮಾಡುತ್ತಿರುವಾಗ ಆತನಿಗೆ ಬಸವಣ್ಣ ದೇವಾಗಿ ಕೊಡುತ್ತಿದ್ದರಂತೆ ಇಬ್ಬರ ನಡುವಿನ ಚರ್ಚೆ-ವಾದ ವಿವಾದ ಉತ್ತರ ಪ್ರತ್ಯುತ್ತರಗಳನ್ನು ಗ್ರಾಮದ ಜನತೆ ಕೇಳಿ ಸಂತಸಗೊಂಡು ಆತ್ಮದ ಅನುಭವವನ್ನು ಹೊಂದುತ್ತಿದ್ದರು. ಶ್ರೀಗಳ ಮುಂದೆ ವಾದದಲ್ಲಿ ಸೋತ ಭೀಮಾ ಎಂಬ ಬ್ರಾಹ್ಮಣ ವ್ಯಕ್ತಿ ಹಾರು ಕರೆದುಕೊಂಡು ಬಂದ ದೇವಣಗಾಂವದ ಸ್ವಾಮಿಗಳಿಗೆ ಮೊದಲು ಲಿಂಗದೀಕ್ಷೆ ಕೊಡಿರಿ ನಂತರ ನನಗೂ ಲಿಂಗದೀಕ್ಷೆ ಕೊಡಬೇಕು ಎಂದು ಶ್ರೀಗಳಲ್ಲಿ ಕೇಳಿಕೊಳ್ಳುತ್ತಾರೆ. ಅದರಂತೆ ಭೀಮಾ ಎಂಬ ಬ್ರಾಹ್ಮಣ ವ್ಯಕ್ತಿಯ ಜೊತೆಗೆ ಬಂದ ಸ್ವಾಮಿಗಳು ಮತ್ತು ಭೀಮಾ ಎಂಬ ಬ್ರಾಹ್ಮಣ ವ್ಯಕ್ತಿಗೂ ಲಿಂಗದೀಕ್ಷೆ ಮಾಡುತ್ತಾರೆ. ಲಿಂಗ ದೀಕ್ಷೆಯನ್ನು ಪಡೆದುಕೊಂಡ ಭೀಮಾ ಎಂಬ ಬ್ರಾಹ್ಮಣ ವ್ಯಕ್ತಿ ಮುಂದೆ ಸಿಂದಗಿ ತಾಲೂಕಿನ ಮಲಗಾಣದಲ್ಲಿ ಭೀಮಾಶಂಕರ ಮಹಾರಾಜ ಎಂಬ ದೊಡ್ಡ ಪವಾಡ ಪುರುಷರಾಗಿ ಬೆಳಗಿ ಬರುತ್ತಾರೆ. ಹಾಗೆಯೇ ಅವರ ಜೊತೆಗೆ ಬಂದ ಸ್ವಾಮಿಗಳು ಕೂಡಾ ದೇವಣಗಾಂವ ಗುರುಲಿಂಗ ಮಹಾಸ್ವಾಮಿಗಳಾಗಿ ಸಮಾಜವನ್ನು ಬೆಳಗುತ್ತಾರೆ. ಈ ಇಬ್ಬರು ಪವಾಡ ಪುರುಷರು ಚನ್ನಬಸವ ಮಹಾಸ್ವಾಮಿಗಳ ಬಗ್ಗೆ ಹಾಡು ಬರೆಯುತ್ತಾರೆ ಈ ಇಬ್ಬರು ಪವಾಡ ಪುರುಷರ ಬೆಳವಣಿಗೆಗೆ ಕರ್ತೃತ್ವ ಸೂತ್ರಧಾರ ಯಾವುದಾದರು ಇದ್ದರೆ ಅದು ಹುಂಚೋಳಿಯ ಶ್ರೀಮಠ ಎಂದು ಹೇಳಲಾಗುತ್ತದೆ.

ಹುಂಚೋಳಿ ಮಠದ ಪೀಠಾಧಿಪತಿಗಳಾದ ಚನ್ನಬಸವ ಮಹಾಸ್ವಾಮಿಗಳು ಅನೇಕ ಪವಾಡಗಳನ್ನು ಮಾಡುತ್ತಾರೆ. ಮುದ್ದೇಬಿಹಾಳ ತಾಲೂಕಿನಲ್ಲಿ ಮೊದಲ ಬಾರಿಗೆ ಬಸವಾದಿ ಪುರಾಣಗಳನ್ನು ಐದು ನೂರು ಪ್ರವಚನಗಳನ್ನು ಸಿದ್ಧಪಡಿಸುತ್ತಾರೆ. ಉತ್ತರ ಕರ್ನಾಟಕದ ಯಾವುದೇ ಮಠಗಳಲ್ಲಿ ಅಥವಾ ಊರಲ್ಲಿ ಸಮಸ್ಯೆಗಳು ಉಂಟಾದಾಗ ಅದನ್ನು ಪರಿಹರಿಸಲು ಹಾನಗಲ್ ಕುಮಾರಸ್ವಾಮಿಗಳು, ಅರಟಾಳ ರುದ್ರಗೌಡರು, ಹೆಮ್ಮಾಡಿ ಚನ್ನಬಸಪ್ಪನವರ ಜೊತೆ ಚನ್ನಬಸವ ಶಿವಯೋಗಿಗಳು ಬರುತ್ತಿದ್ದರು. ಚನ್ನಬಸವ ಶಿವಯೋಗಿಗಳು ಅರಟಾಳ ರುದ್ರಗೌಡರನ್ನು ಮನವೊಲಿಸಿ ಅರಟಾಳದಲ್ಲಿ ಒಂದು ಸಂಗೀತ ಶಾಲೆಯನ್ನು ಪ್ರಾರಂಭಿಸಲು ಕಾರಣರಾಗಿದ್ದಾರೆ. ಅಷ್ಟೇ ಅಲ್ಲ ಉತ್ತರ ಕರ್ನಾಟಕದಲ್ಲಿ ಹೆಮ್ಮರವಾಗಿ ಬೆಳೆದಿರುವ ಕೆ.ಎಲ್.ಇ ಸಂಸ್ಥೆಯ ಸ್ಥಾಪನೆಗೆ ಲಿಂಗಾಯತ ಸಮುದಾಯಕ್ಕೆ ಹಣ ನೀಡುವಂತೆ ಮನವೊಲಿಸಲು ಹಾನಗಲ್ ಕುಮಾರಸ್ವಾಮಿಗಳ ಜೊತೆ ಚನ್ನಬಸವ ಶಿವಯೋಗಿಗಳು ಇದ್ದರು ಎನ್ನುವುದು ಹೆಮ್ಮೆಯ

ವಿಷಯ. ಕುಂಟೋಜಿಯಲ್ಲಿ ನೀರಿನ ಅಭಾವ ಕಂಡುಬಂದಾಗ ಡೆಪ್ಯೂಟಿ ಚನ್ನಬಸಪ್ಪನವರಿಂದ ಒಂದು ಚೌಕಿ ಭಾವಿಯನ್ನು ಕಟ್ಟಿಸಿ ನೀರಿನ ಸಮಸ್ಯೆಯನ್ನು ಪರಿಹರಿಸಿದ ಕೀರ್ತಿ ಚನ್ನಬಸವ ಸ್ವಾಮಿಜಿಗಳಿಗೆ ಸಲ್ಲುತ್ತದೆ. ಕುಂಟೋಜಿಯಲ್ಲಿ ಡೆಪ್ಯೂಟಿ ಚನ್ನಬಸಪ್ಪನವರಿಂದ ನಿರ್ಮಿಸಿದ ಚೌಕಿಭಾವಿ ಇವತ್ತಿಗೂ ನೋಡಬಹುದಾಗಿದೆ.

ನಾಲತವಾಡದ ಶ್ರೀ. ವಿರೇಶ್ವರ ಶರಣರು ಎಂದರೆ ಬಹುದೊಡ್ಡ ತಪಸ್ವಿಗಳು ಪವಾಡ ಪುರಷರು ಅಂತಹ ಮಹಾನ್ ಶರಣರ ಮನೆ ಗುರುಗಳಾಗಿದ್ದವರು ಚನ್ನಬಸವ ಮಹಾಸ್ವಾಮಿಗಳು. ಕುಂಟೋಜಿಯ ಚನ್ನಬಸವ ಸ್ವಾಮಿಗಳು ಮತ್ತು ನಾಲತವಾಡದ ವಿರೇಶ್ವರ ಶರಣರ ನಡುವೆ ಅವಿನಾಭಾವ ಸಂಬಂಧವಿತ್ತು ಚನ್ನಬಸವ ಸ್ವಾಮಿಗಳು ಪೂಜೆ ಮತ್ತು ಪ್ರಸಾದ ಸ್ವೀಕರಿಸಲು ನಾಲತವಾಡ ಶರಣರ ಮನೆಗೆ ಹೋಗುತ್ತಿದ್ದರು. ಚನ್ನಬಸವ ಸ್ವಾಮಿಜಿಗಳು ಒಂದು ದಿನ ನಾಲತವಾಡ ವಿರೇಶ್ವರ ಶರಣರ ಮನೆಗೆ ಪ್ರಸಾದಕ್ಕಾಗಿ ಹೋದಾಗ ಶ್ರೀ. ವಿರೇಶ್ವರ ಶರಣರು 'ಬುದ್ದಿ, ಪೂಜೆ ಮತ್ತು ಪ್ರಸಾದ ಮಾಡಿಕೊಳ್ಳಬೇಕು' ಎಂದು ಕೇಳುತ್ತಾರೆ. ಅವಾಗ ಚನ್ನಬಸವ ಸ್ವಾಮಿಜಿಗಳು ಆಯಿತಪ್ಪ ಪೂಜೆ ಪ್ರಸಾದ ಮಾಡಿಕೊಳ್ಳತೀವಿ ಆದ್ರ ಮನ್ಯಾಗ ಏನೂ ಇದ್ದಾಂಗಿಲ್ಲ ನನ್ನ ಹಿಂದ ನಾಲ್ಕು ಜನ ಸ್ವಾಮಿಗಳಿದ್ದಾರ ನೀವೇನು ಪ್ರಸಾದ ಮಾಡಿಸ್ತಿರಿ ಎಂದು ಹೇಳುತ್ತಾರೆ ಆಗ ಶ್ರೀ. ವಿರೇಶ್ವರ ಶರಣರು 'ನೀವು ಸ್ನಾನರ ಮಾಡ್ರಿ, ನೀವು ಸ್ನಾನ ಪೂಜೆ ಮಾಡಿಕೊಳ್ಳುವುದರೊಳಗ ನನ್ನ ಧರ್ಮ ಪತ್ನಿ ಅಡಿಗೆ ಮಾಡುತ್ತಾಳ' ಎಂದು ಹೇಳುತ್ತಾರೆ. ಶರಣರ ಧರ್ಮಪತ್ನಿ ಇಸ ಅಕ್ಕಿಯಲ್ಲಿ ಅಡಿಗಿ ಮಾಡತಾಳ ಪೂಜೆ ಮುಗಿಸಿದ ಶ್ರೀ. ಚನ್ನಬಸವ ಸ್ವಾಮಿಗಳು ಅನ್ನದ ಬೋಗಣೆ ನೋಡಿ ಹಿಂದಿದ್ದವರಿಗೆ ಶರಣರ ಮನೆಯಲ್ಲಿ ಏನು ಇದ್ದಂಗಿಲ್ಲ ಸ್ವಲ್ಪ ಊಟ ಮಾಡಿ ಎದ್ದು ಬಿಡ್ರಿ ಎಂದು ಸನ್ನೆ ಮಾಡುತ್ತಾರೆ ನಾಲತವಾಡ ಶರಣರು ಸ್ವತಃ ಪ್ರಸಾದವನ್ನು ಎಡೆಬಡಿಸಿದಾಗ ನಾಲ್ಕು ಜನ ಸಾಕಾಗುವಷ್ಟು ಊಟ ಮಾಡಿದರೂ ಇನ್ನೂ ಅನ್ನಪ್ರಸಾದ ಹಾಗೆಯೇ ಉಳಿದಿರುತ್ತದೆ. ಅದು ಶರಣರ ಪವಾಡವೇ ಸರಿ. ಕುಂಟೋಜಿಯ ಚನ್ನಬಸವ ಸ್ವಾಮಿಜಿಗಳು ಮತ್ತು ವಿರೇಶ್ವರ ಶರಣರು ಇಬ್ಬರು ತಪಸ್ವಿಗಳು ಒಂದು ಕಡೆ ಸೇರಿದರೆ ಕೃಪಾಳ ಬೆಳಕು ಚೆಲ್ಲುತ್ತಿತ್ತು.

<u>ಮಠದ ಪರಂಪರೆ :</u>

1) ಶ್ರೀ ಚನ್ನಬಸವ ಸ್ವಾಮಿಗಳು
2) ಶ್ರೀ ಮರಿದೇವ ಸ್ವಾಮಿಗಳು
3) ಶ್ರೀ ಸದಾನಂದ ಮಹಾಸ್ವಾಮಿಗಳು
4) ಶ್ರೀ ರುದ್ರಮೂನಿ ಶಿವಾಚಾರ್ಯ
5) ಶ್ರೀ ಚನ್ನವೀರದೇವರು

[illegible]

ಮತ್ತು ವೇದಗಳನ್ನು ಅಧ್ಯಯನ ಮಾಡಿದರು. ನಂತರ ಮೈಸೂರಿನ ಸುತ್ತೂರು ಮಠದಲ್ಲಿ ಸುತ್ತೂರಿನ ಜಗದ್ಗುರು ಶ್ರೀಶ್ರೀಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಸನ್ನಿಧಾನದಲ್ಲಿ ಸುಮಾರು ಹತ್ತು ವರ್ಷಗಳ ಕಾಲ ಅಧ್ಯಯನ ಮಾಡುತ್ತಾರೆ. ಅಲ್ಲದೆ ಮೈಸೂರ ಮಾನಸ ಗಂಗೋತ್ರಿಯಲ್ಲಿ ಎಂ.ಎ ಪದವಿಯನ್ನು ಪಡೆದುಕೊಂಡರು. ನಂತರ ಸುತ್ತೂರ ಮಠದ ಧಾರ್ಮಿಕ ಮತ್ತು ದತ್ತಿ ಇಲಾಖೆಯಿಂದ ಪ್ರತಿ ಹಳ್ಳಿಗಳಲ್ಲಿ ಧರ್ಮ ಪ್ರಚಾರ ಮತ್ತು ಸಮಾಜ ಸೇವೆಯನ್ನು ಮಾಡಿದರು.

ತದನಂತರ ಶ್ರೀ ಚನ್ನವೀರ ದೇವರು ತಮ್ಮ ಜನ್ಮಸ್ಥಳವಾದ ಕುಂಟೋಜಿಗೆ ಬರುತ್ತಾರೆ. ಕುಂಟೋಜಿಯ ಹಿರೇಮಠ ಅತ್ಯಂತ ದುಸ್ಥಿತಿಯಲ್ಲಿರುತ್ತದೆ. ಮಠದ ಅತ್ಯಂತ ಹಳೆಯದಾದ ಕಟ್ಟಡದಲ್ಲಿ ದಿನ ನಿತ್ಯದ ಪೂಜೆ ಮಾಡುವದಕ್ಕೂ ತೊಂದರೆಯಾಗುತಿತ್ತು. ಮಳೆಗಾಲದಲ್ಲಂತು ಮೇಲಿನಿಂದ ಮಣ್ಣು ಮತ್ತು ನೀರು ಒಟ್ಟಿಗೆ ಹರಿದು ಬರುತ್ತಿತ್ತು ಇಂತಹ ಪರಸ್ಥಿತಿಯಲ್ಲಿ ಮಠದ ನಿರ್ಮಾಣದ ಸಂಕಲ್ಪಮಾಡಿ ನಾಡಿನಾದ್ಯಂತ ಪಾದಯಾತ್ರೆ, ಪ್ರವಚನ, ಪ್ರವಾಸ ಮಾಡಿ ಭಕ್ತಾದಿಗಳಲ್ಲಿ ವಂತಿಗೆಯನ್ನು ಸಂಗ್ರಹಿಸಿ ಅರವತ್ತೈದು ಲಕ್ಷ ರೂಪಾಯಿಗಳಲ್ಲಿ ಸುಂದರವಾದ ಮಠವನ್ನು ನಿರ್ಮಿಸಿಕೊಂಡರು.

ಪ್ರಸ್ತುತ ಮಠದಲ್ಲಿ ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಲಕ್ಷ ದೀಪೋತ್ಸವದಂತಹ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತವೆ. ಇದರ ಜೊತೆಗೆ 2006ರಲ್ಲಿ ಸಾಮೂಹಿಕ ವಿವಾಹಗಳನ್ನು ಮಾಡಿ ಜನರ ಮೆಚ್ಚಿಗೆಯನ್ನು ಪಡೆದುಕೊಂಡಿದ್ದಾರೆ. ಚಿಕ್ಕ ವಯಸ್ಸನಲ್ಲಿಯೆ ಮಠದ ಜವಬ್ದಾರಿಯನ್ನು ಹೊತ್ತ ಶ್ರೀ ಚನ್ನವೀರ ದೇವರು ಕುಂಟೋಜಿಯ ಹಿರೇಮಠವು ದಕ್ಷಿಣ ಭಾರತದ ಮಠ ಮಾನ್ಯಗಳ ಸಾಲಿನಲ್ಲಿ ಗುರುತಿಸಿಕೊಳ್ಳುವಂತೆ ಶ್ರಮಿಸಿದ್ದಾರೆ. ಉತ್ತಮ ವಾಗ್ಮಿಗಳು ಆದ ಶ್ರೀ ಚನ್ನವೀರ ದೇವರು ನಾಡಿನ ತುಂಬೆಲ್ಲ ವಿವಿಧ ಸಮಾಜಿಕ, ಧಾರ್ಮಿಕ, ಅಧ್ಯಾತ್ಮಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ದಿವ್ಯಸಾನಿಧ್ಯವನ್ನು ವಹಿಸಿಕೊಂಡು ತಮ್ಮ ವೈಚಾರಿಕ ಮಾತುಗಳ ಮೂಲಕ ಸಹಸ್ರಾರು ಭಕ್ತರ ಮನಸ್ಸನ್ನು ಗೆದ್ದಿದ್ದಾರೆ. ಕುಂಟೋಜಿಯ ಹಿರೇಮಠವು ಯಾವುದೇ ಒಂದು ಜಾತಿ ಧರ್ಮಕ್ಕೆ ಸಿಮಿತವಾಗಿರದೆ ಸರ್ವ ಜನಾಂಗಗಳ ಶಾಂತಿಯ ತೋಟವನ್ನಾಗಿ ಮಠ ಗುರುತಿಸಿಕೊಳ್ಳಬೇಕು ಎಂಬ ಹಂಬಲವನ್ನು ಶ್ರೀ ಚನ್ನವೀರ ದೇವರು ಹೊಂದಿದ್ದಾರೆ.

**ಆಕರ ಗ್ರಂಥಗಳು :**


1) ವಿನಂತಿಯ ಮೇರೆಗೆ – ಪ್ರೋ॥ ಬಿ. ಬಿ. ಕಡ್ಲಿ

2) ಮುದ್ದೇಬಿಹಾಳ ತಾಲೂಕಿನ ಇತಿಹಾಸ ದರ್ಶನ – ಡಾ॥ ಎಸ್. ಕೆ. ಮೇಲಕಾರ

3) ದಿನ ಪತ್ರಿಕೆಗಳು

4) ಮಾಸ ಪತ್ರಿಕೆಗಳು

5) ಮಠದ ಶ್ರೀಗಳೊಂದಿಗೆ ಸಂದರ್ಶನ

ಸಿದ್ಧಗಂಗಾ ಮಠದ ಮಠಾಧಿಪತಿಗಳಾಗಿದ್ದ ಶ್ರೀ ಶಿವಕುಮಾರ ಸ್ವಾಮಿಗಳು ಒಬ್ಬ ಭಾರತೀಯ ಆಧ್ಯಾತ್ಮಿಕ ನಾಯಕ, ಮಾನವೀಯ ಮತ್ತು ಶಿಕ್ಷಣ ತಜ್ಞ, ಅವರು ಶ್ರೀ ಸಿದ್ಧಗಂಗ ಶಿಕ್ಷಣ ಸಂಸ್ಥೆಯನ್ನು ಹುಟ್ಟು ಹಾಕಿದರು. ಅವರನ್ನು ರಾಜ್ಯದಲ್ಲಿ ನಡೆದಾಡುವ ದೇವರು ಎಂದೂ ಕೂಡ ಉಲ್ಲೇಖಿಸಲಾಗಿದೆ. ಭಾರತದಲ್ಲಿ ವಾಸಿಸುತ್ತಿದ್ದ ಅತೀ ಪುರಾತನ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು. ಅವರಿಗೆ ಭಾರತ ಸರಕಾರ 2015ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿದೆ.

ಇವರು ತ್ರಿವಿಧ ದಾಸೋಹಿ, ಯುಗಪುರುಷ, ಬಸವಣ್ಣನವರ ಕಾಯಕವೇ ಕೈಲಾಸ ಮತ್ತು ನಿತ್ಯ ದಾಸೋಹ ತತ್ವದ ಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡವರು, ಇವರು ಶ್ರೀಮಠದ ಜವಾಬ್ದಾರಿಯನ್ನು 1930ರಲ್ಲಿ ಹೊತ್ತುಕೊಂಡವರು, ನಿರಂತರ ಸಮಾಜದ ಏಳಿಗೆಗಾಗಿ ಶ್ರಮಿಸುತ್ತಿದ್ದರು. ಶ್ರೀಗಳು ಮಠದ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡ ಸಂದರ್ಭದಲ್ಲಿ ಮಠದ ಆದಾಯ ತುಂಬಾ ಕಡಿಮೆ ಇತ್ತು. ಮಠದ ಭೂಮಿಯೆಲ್ಲ ಮಳೆಯಾಧಾರಿತವಾದ್ದು. ಇವೆಲ್ಲವುಗಳನ್ನು ಧೈರ್ಯವಾಗಿ ಮೆಟ್ಟನಿಂತು ಶ್ರೀಗಳು ದವಸ ಧಾನ್ಯಗಳನ್ನು ಭಕ್ತರ ಮನೆಯಿಂದ ತಂದಿದ್ದು ಉಂಟು. ಮಠದ ಶಿಕ್ಷಣ ಸಂಸ್ಥೆಗಳನ್ನು ವಿದ್ಯಾರ್ಥಿ ನಿಲಯಗಳಲ್ಲಿ ಸಮರ್ಥವಾಗಿ ಮುನ್ನಡೆಸಿದವರು. ವಯೋಸಂಬಂಧಿ ಅನಾರೋಗ್ಯದಿಂದ 2019 ಜನೇವರಿ 21 ರಂದು ಬೆಳಿಗ್ಗೆ ರಕ್ತದೊತ್ತಡ ಏರುಪೇರಾಗಿ ಶ್ರೀಗಳು ಸಿದ್ಧಗಂಗಾ ಮಠದ ಹಳೆಯ ಕಟ್ಟಡದಲ್ಲಿ ತಮ್ಮ 111 ವಯಸ್ಸಿನಲ್ಲಿ ಲಿಂಗೈಕ್ಯರಾದರು.

– ಪ್ರಾ. ಎ. ಬಿ. ಕುಲಕರ್ಣಿ
ಎಂ.ಜಿ.ವ್ಹಿ.ಸಿ. ಮಹಾವಿದ್ಯಾಲಯ
ಮುದ್ದೇಬಿಹಾಳ



ISBN 978 93 92187 01 8